# ಅಲಿಯ ನಾಗಾಲೋಟ

'ಈ ವರ್ಷ ಬಾಲಿವುಡ್‌ನಲ್ಲಿ ಗಮನಿಸಲೇಬೇಕಾದ ಹತ್ತು ಪ್ರತಿಭೆಗಳಲ್ಲಿ ಅಲಿ ಫಜಲ್ ಮುಂಚೂಣಿಯಲ್ಲಿದ್ದಾನೆ' ಎನ್ನುವುದು ಈಗ ವ್ಯಾಪಕವಾಗಿ ಕೇಳಿಬರುತ್ತಿರುವ ಮಾತು. ಐದಾರು ವರ್ಷಗಳ ಹಿಂದೆ ಕೇವಲ ಒಬ್ಬ ಹೊಸ ಪ್ರತಿಭೆಯಂತಿದ್ದ ಅಲಿ ಫಜಲ್ ಈಗ ಬಾಲಿವುಡ್‌ನ ಸೆಲೆಬ್ರಿಟಿ ನಟರಲ್ಲಿ ಒಬ್ಬನಾಗಿದ್ದಾನೆ. ಈ ವಾರ ಬಿಡುಗಡೆಯಾದ ಇಂಗ್ಲಿಷ್ ಚಿತ್ರ 'ವಿಕ್ಟೋರಿಯಾ ಆ್ಯಂಡ್ ಅಬ್ದುಲ್'ನಲ್ಲಿ ಈತನ ನಟನೆಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಬಾಲಿವುಡ್ ಮಾತ್ರವಲ್ಲ, ಹಾಲಿವುಡ್‌ನಲ್ಲೂ ಈತನ ಮೇಲೆ ಪ್ರಶಂಸೆಯ ಮಳೆ ಸುರಿಯುತ್ತಿದೆ. ಹಿಂದೆ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡಿದ್ದ, ಈ ವರ್ಷ ಮತ್ತೆ 'ಎಲಿಜಬೆತ್' ನಟನೆಗೇ ಆಸ್ಕರ್ ಮೇಲೆ ಕಣ್ಣಿಟ್ಟಿರುವ ಹಿರಿಯ ನಟಿ ಜೂಡಿ ಡೆಂಚ್ ಎದುರು ಅಲಿ ಫಜಲ್ ಪ್ರತಿಭಾಪೂರ್ಣ ಪ್ರದರ್ಶನ ನೀಡಿರುವುದೇ ಈ ಹೊಗಳಿಕೆಗೆ ಕಾರಣ. ಮುಂಬೈಯಿಂದ ಹೊರಟು ಹಾಲಿವುಡ್‌ನಲ್ಲಿ ಹಲವು ಅವಕಾಶಗಳನ್ನು ಬಾಚಿಕೊಂಡಿರುವ ದೇವ್ ಪಟೇಲ್‌ನನ್ನೇ ಚಿತ್ ಮಾಡಿ 'ಎಲಿಜಬೆತ್ ಆ್ಯಂಡ್ ಅಬ್ದುಲ್' ಚಿತ್ರದ ಪಾತ್ರವನ್ನು ಅಲಿ ಫಜಲ್ ಕೈವಶ ಮಾಡಿಕೊಂಡ ಎನ್ನುವ ಸುದ್ದಿಗಳೂ ಹಬ್ಬಿವೆ. 74ನೇ ವೆನಿಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಪ್ರದರ್ಶನ ಕಂಡ ಈ ಸಿನಿಮಾ ಹಾಲಿವುಡ್‌ನಲ್ಲೂ ಅಲಿ ಫಜಲ್‌ಗೆ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿದೆ.

ಮುಂಬೈಯ ಸೈಂಟ್ ಕ್ಸೇವಿಯರ್‌ನಲ್ಲಿ ಕಾಲೇಜು ಕಲಿಯುತ್ತಿದ್ದಾಗಲೇ ಅಮೀರ್ ಖಾನ್‌ನ 'ಥ್ರೀ ಈಡಿಯಟ್ಸ್' ಸಿನಿಮಾದಲ್ಲಿ ವಿಶೇಷ ಪಾತ್ರವೊಂದಕ್ಕೆ ಆಯ್ಕೆಯಾದವನು ಅಲಿ. ಅದಕ್ಕೂ ಮುನ್ನ ಇಂಗ್ಲಿಷ್ ನಾಟಕಗಳಲ್ಲಿ ನಟಿಸುತ್ತಾ ಸೈಕಲ್ ಹೊಡೆಯುತ್ತಿದ್ದ ಅಲಿಗೆ 'ಥ್ರೀ ಈಡಿಯಟ್ಸ್' ಸಣ್ಣದಾದ ಒಂದು ಬ್ರೇಕ್ ನೀಡಿತು. ಆದರೆ ಇಲ್ಲಿ ಅವಕಾಶಗಳನ್ನು ಅರಸುವ ಬದಲು ಗೆಳೆಯನೊಬ್ಬನನ್ನು ಹುಡುಕಿಕೊಂಡು ಸ್ಯಾನ್ ಫ್ರಾನ್ಸಿಸ್ಕೋಗೆ ತೆರಳಿದ. ಅಲ್ಲಿ ಹಾಲಿವುಡ್ ನಿರ್ದೇಶಕರ ಪರಿಚಯ ಮಾಡಿಕೊಂಡ. ಸಣ್ಣ ಪುಟ್ಟ ಅವಕಾಶಗಳನ್ನು ಗಿಟ್ಟಿಸಿದ. ಮರಳಿ ಮುಂಬೈಗೆ ಬಂದಾಗ, ಈತನ ಫ್ರೆಶ್ ಮುಖವನ್ನು ಕಂಡು ನಿರ್ಮಾಪಕರು ಹತ್ತಿರ ಸೇರಿಸಿಕೊಂಡರು.

ನೋಡಲು ಸ್ಫುರದ್ರೂಪಿಯೂ ಆಗಿರುವ ಯುವಕನನ್ನು ಒಮ್ಮೆ ಬಾಲಿವುಡ್ ಕೈ ಹಿಡಿದದ್ದೇ ಸಾಕು, ಅವಕಾಶಗಳು ಅರಸಿ ಬಂದವು. ಫರ್ಕೇ, ಆಲ್ವೇಸ್ ಕಭೀ ಕಭೀ, ಬಾಬ್ಬಿ ಜಾಸೂಸ್, ಹ್ಯಾಪಿ ಭಾಗ್ ಜಾಯೆಗಿ– ಹೀಗೆ ಈತ ನಟಿಸಿದ ಚಿತ್ರಗಳ ಪಟ್ಟಿ ಬೆಳೆಯಿತು. ಈ ಮಧ್ಯೆ ಹಾಲಿವುಡ್‌ನಲ್ಲಿ 'ಫಾಸ್ಟ್ ಆ್ಯಂಡ್ ಫ್ಯೂರಿಯಸ್–7'ನಲ್ಲೂ ಒಂದು ಉತ್ತಮ ಪಾತ್ರ ಸಿಕ್ಕಿತು. ಈತನ ಲಂಡನ್ ಮಾದರಿಯ ಅತ್ಯುತ್ತಮ ಇಂಗ್ಲಿಷ್ ಮೆಚ್ಚಿಕೊಂಡ ಹಾಲಿವುಡ್ ನಿರ್ದೇಶಕರು ಮತ್ತೆ ಮತ್ತೆ ಅಲ್ಲಿಗೆ ಕರೆಸಿಕೊಂಡರು. ಈ ವರ್ಷ ಆಗಸ್ಟ್‌ನೊಳಗೇ ಕೆಲಸದ ನಿಮಿತ್ತ ಈತ ನಾಲ್ಕು ಬಾರಿ ಅಮೆರಿಕಕ್ಕೆ ಹೋಗಿ ಬಂದಿದ್ದಾನೆಂದರೆ, ಅಲ್ಲಿ ಈತ ಮಾಡಿರುವ ಮೋಡಿಯನ್ನು ಅರ್ಥೈಸಿಕೊಳ್ಳಬಹುದು.

ಹುಟ್ಟಿದ್ದು ಲಖನೌದಲ್ಲಿ. ಬಾಲ್ಯದಲ್ಲೇ ಈತನಿಗೆ ಸಿನಿಮಾ ಹುಚ್ಚು. ಅಮ್ಮನ ಬಳಿ ಕಥೆ ಹೇಳು ಎಂದು ಪೀಡಿಸುತ್ತಿದ್ದರೆ, ಆಕೆ ಹೇಳುತ್ತಿದ್ದುದು 'ಗಾಡ್‌ಫಾದರ್' ಕಥೆಯನ್ನು! ಅದನ್ನೇ ಕೇಳುತ್ತಾ ಇಂಗ್ಲಿಷ್ ಸಿನಿಮಾಗಳನ್ನು ನೋಡುತ್ತಾ ಬೆಳೆದ ಅಲಿ, ಮರ್ಲಿನ್ ಬ್ರಾಂಡೋನ ಕಟ್ಟಾ ಅಭಿಮಾನಿಯಾದ. ಆದರೆ ಮುಂಬೈಯ ಇಂಗ್ಲಿಷ್ ರಂಗಭೂಮಿಯ ಬಗ್ಗೆ ಈತನಿಗೆ ಈಗಲೂ ಅಸಮಾಧಾನವಿದೆ. 'ಅಲ್ಲಿ ಪ್ರತಿಭೆಗಿಂತ ಹೆಚ್ಚಾಗಿ ಅಲೆದಾಟಕ್ಕೇ ಮನ್ನಣೆ ಸಿಗುವುದು' ಎನ್ನುವುದು ಈತನ ಅನುಭವ. 'ಬರೀ ಜುಬ್ಬಾ ಹಾಕಿಕೊಂಡು ಸಿಗರೇಟ್ ಸೇದುತ್ತಾ ಓಡಾಡಿದರಷ್ಟೇ ನಟರಾಗುತ್ತಾರೆ ಎಂದು ಕೆಲವರು ತಿಳಿದುಕೊಂಡಿದ್ದಾರೆ' ಎನ್ನುವುದು ಪರೋಕ್ಷ ಆರೋಪ.

ಬಾಲಿವುಡ್– ಹಾಲಿವುಡ್ ಎಂದು ಓಡಾಡಿದಂತೆಯೇ ಈತನ ಬಗ್ಗೆ ಗಾಸಿಪ್‌ಗಳೂ ಹುಟ್ಟಿಕೊಂಡವು. 'ಫಖ್ರೀ' ಚಿತ್ರದಲ್ಲಿ ತನ್ನ ಜತೆಗೆ ನಟಿಸಿದ ನಟಿ ರಿಚಾ ಚಡ್ಡಾ ಜತೆಗೆ ಹೆಚ್ಚು ಓಡಾಡುತ್ತಾನೆ ಎಂದು ಪತ್ರಿಕೆಗಳು ಗಾಸಿಪ್ ಬರೆದವು. ಈತ ಆಕೆಯ ಜತೆಗೆ ಒಟ್ಟಿಗೇ ನಿಂತ ಸೆಲ್ಫೀ ತೆಗೆದು 'ಇನ್‌ಸ್ಟಾಗ್ರಾಮ್'ನಲ್ಲಿ ಹಾಕಿ, 'ಏನೀವಾಗ?' ಎಂದು ಸವಾಲು ಹಾಕಿದ. ಮಾತ್ರವಲ್ಲ, ರಿಚಾ ಚಡ್ಡಾಳನ್ನು 'ಎಲಿಜಬೆತ್ ಆ್ಯಂಡ್ ಅಬ್ದುಲ್' ಚಿತ್ರದ ಪ್ರೀಮಿಯಂ ಶೋಗೆ ಕರೆದೊಯ್ದ. ಈಗ ಇವರಿಬ್ಬರೂ ಸದ್ಯಕ್ಕೆ ಮದುವೆ ಆಗಲಿದ್ದಾರೆ ಎನ್ನುವ ಸುದ್ದಿ ಹಬ್ಬಿದೆ.

ತಮಾಷೆಯೆಂದರೆ ತಾನು ಈವರೆಗೆ ನಟಿಸಿದ ಯಾವ ಚಿತ್ರಗಳನ್ನೂ ಈತ ನೋಡಿಲ್ಲವಂತೆ. 'ನಾನೊಬ್ಬ ನಿಷ್ಠುರ ವಿಮರ್ಶಕ. ನನ್ನ ನಟನೆಯ ಬಗ್ಗೆಯೇ ನನಗೆ ಅಸಮಾಧಾನಗಳಿವೆ. ಸಿನಿಮಾ ನೋಡಿದ ಬಳಿಕ ಅದನ್ನು ಬಹಿರಂಗವಾಗಿ ಹೇಳಿದರೆ ಯಾರಾದರೂ ಏನು ತಿಳಿದುಕೊಂಡಾರು? ಬಾಲಿವುಡ್‌ನಲ್ಲಿ ಯಾವ ವಿಷಯವನ್ನೂ ನಿರ್ಭಿಡೆಯಿಂದ ಮಾತನಾಡುವಂತಿಲ್ಲ' ಎನ್ನುವುದು ಈತನ ಕಾರಣ! ದಿಲೀಪ್ ಕುಮಾರ್ ಈತನಿಗೆ ಆರಾಧ್ಯ ದೈವ. ಜತೆಗೇ ಗುರುದತ್, ಓಂಪುರಿ, ನಾಸಿರುದ್ದೀನ್ ಶಾ ಮತ್ತು ಅಮಿತಾಭ್ ಅಭಿಮಾನಿ. ಅಂದ ಹಾಗೆ ಈತ ಅತ್ಯುತ್ತಮ ಪೇಂಟರ್ ಕೂಡಾ ಹೌದು. ಬಾಲಿವುಡ್‌ನಲ್ಲಿ ಬಹಳ ಮಂದಿಗೆ ಈ ಸತ್ಯ ಗೊತ್ತಿಲ್ಲ. ಹಾಲಿವುಡ್‌ನಲ್ಲೂ ಮತ್ತೆ ಎರಡು ಚಿತ್ರಗಳಿಗೆ ಬುಲಾವ್ ಬಂದಿದೆ. ಸದ್ಯಕ್ಕಂತೂ ಈತನದ್ದು ನಾಗಾಲೋಟ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65